ರಾಜ್ಯದಲ್ಲಿ ಕಲಾವಿದರುಗಳು

479(352) - ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಜನ ಕಲಾವಿದರಿರುತ್ತಾರೆ. ಜಿಲ್ಲಾವಾರು ವಿವರ ನೀಡುವುದು.

ಆ) ಕಲಾವಿದರು ಮಾಸಾಶನ ಕೋರಿ ಸಲ್ಲಿಸಿರುವ ಸಂಖ್ಯೆ ಎಷ್ಟು?

ಇ) ಎಷ್ಟು ಜನ ಕಲಾವಿದರಿಗೆ ಮಾಸಾಶನ ನೀಡಲಾಗುತ್ತಿದೆ; ಜಿಲ್ಲಾವಾರು ವಿವರ ನೀಡುವುದು.

ಈ) ಮಾಸಾಶನ ನೀಡದೇ ಉಳಿದ ಅರ್ಜಿಗಳೆಷ್ಟು? ಉಳಿದ ಕಲಾವಿದರಿಗೆ ಯಾವ ಸಾಲಿನಿಂದ ಮಾಸಾಶನ ಮಂಜೂರು ಮಾಡಲಾಗುವುದು.

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ರಾಜ್ಯ ಸಚಿವರು):

ಅ) ಇಲಾಖೆ ಕಲಾವಿದರ ಸಮೀಕ್ಷೆ ನಡೆಸಿರುವುದಿಲ್ಲ.

ಆ) ಕಲಾವಿದರ ಮಾಸಾಶನ ಕೋರಿ ಇಲಾಖೆಗೆ ಬಂದಿರುವ ಈವರೆಗಿನ ಅರ್ಜಿಗಳು 12,807.

ಇ) ಈವರೆಗೆ ಒಟ್ಟು 11, 804 ಮಂದಿ ಕಲಾವಿದರಿಗೆ ಮಾಸಾಶನ ನೀಡಲಾಗುತ್ತಿದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಿದೆ.

ಈ) ಅ) ಬಾಕಿ ಉಳಿದಿರುವ ಅರ್ಜಿಗಳು - 1003

ಆ) ನಿಯಮಗಳು ರೀತಿ ಅರ್ಹರಾಗಿರುವ 474 ಕಲಾವಿದರಿಗೆ ಮಾಸಾಶನ ಮಂಜೂರು ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಬಂದಿದ್ದು ಪರಿಶೀಲಿಸಲಾಗುತ್ತಿದೆ. ಉಳಿದ ಅರ್ಜಿಗಳನ್ನು ಈ ಉದ್ದೇಶಕ್ಕಾಗಿ ರಚಿಸಿರುವ ಪರಿಣಿತರ ಸಮಿತಿಯ ಮುಂದಿರಿಸಿ ಕ್ರಮ ಕೈಗೊಳ್ಳಲಾಗುವುದು.

ಅನುಬಂಧ

ಮಾಹೆಯಾನ ರೂ. 250, ರೂ ರೂ. 500 1000.00 ಹಾಗೂ ರೂ. 1500.00 ರೂ.ಗಳ ಮತ್ತು 200.00 ರೂ.ಗಳ ವಿಧವಾ ಮಾಸಾಶನವನ್ನು ಪಡೆಯುತ್ತಿರುವ ಸಾಹಿತಿ ಮತ್ತು ವಿವಿಧ ಪ್ರಕಾರಗಳ ಕಲಾವಿದರ ಜಿಲ್ಲಾವಾರು ವಿವರ (1975 ರಿಂದ ಮಾಸಾಶನ ಮಂಜೂರಾಗಿರುವ ವಿವರಗಳು)

ಕ್ರಮ ಸಂಖ್ಯೆ	ಜಿಲ್ಲೆಗಳ ಹೆಸರು		ಕಲಾವಿದರ ಸಂಖ್ಯೆ
1)	ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ	-	2060
2)	ಕೋಲಾರ	-	452
3)	ತುಮಕೂರು	-	748
4)	ಶಿವಮೊಗ್ಗ	-	249
5)	ಚಿತ್ರದುರ್ಗ	-	327
6)	ದಾವಣಗೆರೆ	-	193
7)	ಮೈಸೂರು	-	849
8)	ಮಂಡ್ಯ	-	504
9)	ಹಾಸನ	-	240
10)	ಕೊಡಗು	-	17
11)	ದಕ್ಷಿಣ ಕನ್ನಡ	-	222
12)	ಚಿಕ್ಕಮಗಳೂರು	-	142
13)	ಚಾಮರಾಜನಗರ	-	115
14)	ಗುಲ್ಬರ್ಗಾ	-	196
15)	ಬಳ್ಳಾರಿ	-	588
16)	ಬಿಜಾಪುರ	-	553
17)	ಬಾಗಲಕೋಟೆ	-	881
18)	ಉತ್ತರ ಕನ್ನಡ	-	189
19)	ಧಾರವಾಡ	-	481
20)	ಬೀದರ್	-	119

1	2		3
21)	ರಾಯಚೂರು	-	179
22)	ಬೆಳಗಾವಿ	-	835
23)	ಗದಗ	-	249
24)	ಕೊಪ್ಪಳ	-	1149
25.	ಹಾವೇರಿ	-	192
26)	ಉಡುಪಿ	-	119
27)	ಹೊರನಾಡ ಕನ್ನಡಿಗರು (ಕಾಸರಗೋಡು, ದೆಹಲಿ ಮಹಾರಾಷ್ಟ್ರ)	-	21
28)	ವಿಧವಾ ಮಾಸಾಶನ	-	935
	ಒಟ್ಟು	-	11,804

ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಬರುವ ರಸ್ತೆಗಳ ದುರಸ್ತಿ

480(355) - ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಬರುವ ರಸ್ತೆಗಳ ದುರಸ್ತಿಗೆ ಯಾವ ಆಧಾರದ ಮೇಲೆ ಹಣ ಬಿಡುಗಡೆ ಮಾಡಲಾಗುತ್ತಿದೆ;

ಆ) ಕಿ.ಮೀ ಒಂದಕ್ಕೆ ರಸ್ತೆ ದುರಸ್ತಿಗಾಗಿ ಎಷ್ಟು ಹಣ ನೀಡಬೇಕೆಂದು ನಿಯಮವಿರುತ್ತದೆ;

ಇ) ಧಾರವಾಡ ಜಿಲ್ಲೆಗೆ ಪ್ರಸಕ್ತ ಸಾಲಿನಲ್ಲಿ ರಸ್ತೆ ದುರಸ್ತಿಗೆಂದು ಬಿಡುಗಡೆ ಮಾಡಿದ ಹಣ ಎಷ್ಟು; ಯಾವ ಯಾವ ರಸ್ತೆಗಳಿಗೆ ಈ ಹಣ ಖರ್ಚು ಮಾಡುವ ಉದ್ದೇಶವಿದೆ ವಿವರ ನೀಡುವುದು?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಬಿಡುಗಡೆಯಾದ ಅನುದಾನವನ್ನು ತಾಲ್ಲೂಕಿನ ರಸ್ತೆಗಳ ಸ್ಥಿತಿಗಳ ಅನುಸಾರವಾಗಿ ಜಿಲ್ಲಾ ಪಂಚಾಯಿತಿಗಳಿಗೆ ನೀಡಲಾಗುವುದು.

ಆ) ಗ್ರಾಮೀಣ ರಸ್ತೆಗಳ ದುರಸ್ತಿಗಾಗಿ ನಿಯಮದಂತೆ ಪ್ರತಿ ಕಿ.ಮೀ.ಗೆ ಈ ಕೆಳಕಂಡಂತೆ ಹಣ ನೀಡಬೇಕಾಗುತ್ತದೆ.